*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 12-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರಿಂದಃ</u>

ಪ್ರಶ್ನೆಃ ಯಾವ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವು ತನಿಖೆಯನ್ನು ಪ್ರಾರಂಭಿಸಿದ್ದೀರಿ ?

ಉತ್ತರಃ ದಿಃ 18-11-2021 ರಂದು ರಾತ್ರಿ 8.15 ನಿಮಿಷಕ್ಕೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಪ್ರಾರಂಭಿಸಿದ್ದೇನೆ.

29. ಯಾವುದೇ ಸಂಜ್ಞೇಯ ಅಪರಾಧ ನಡೆದ ಬಗ್ಗೆ ಮಾಹಿತಿ ಬಂದ ತಕ್ಷಣವೇ ನೀವು ಪ್ರಕರಣವನ್ನು ದಾಖಲಿಸಬೇಕಾಗುತ್ತದೆ, ವಿಳಂಬ ಇಲ್ಲದೇ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಬೇಕಾಗುತ್ತದೆ, ಆರೋಪಿಯ ಪತ್ತೆಗಾಗಿ ಎಲ್ಲಾ ಠಾಣೆಗಳಿಗೆ ಸಂದೇಶ ಕಳುಹಿಸಬೇಕಾಗುತ್ತದೆ ಎಂದರೆ ಸರಿ. ಕೂಡಲೇ ಸ್ಥಳಕ್ಕೆ ಭೇಟಿ ನೀಡಬೇಕಾಗುತ್ತದೆ, ಸ್ಥಳವನ್ನು ಸಂರಕ್ಷಿಸಬೇಕಾಗುತ್ತದೆ ಮತ್ತು ಸ್ಥಳದಲ್ಲೇ ಹಾಜರಿರುವ ಸಾಕ್ಷಿದಾರರ ಹೇಳಿಕೆಗಳನ್ನು

ಪಡೆಯಬೇಕಾಗುತ್ತದೆ ಎಂದರೆ ಸರಿ.

30. ದಿಃ 18-11-2021 ರಂದು ನೀವು ಯಾವುದಾದರೂ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಸ್ಥಳಕ್ಕೆ ಶ್ವಾನದಳವನ್ನು ಕಳುಹಿಸಿದ್ದೀರಾ ಎಂದರೆ ಸಾಕ್ಷಿ ನಾನು ಸ್ಥಳಕ್ಕೆ ಭೇಟಿ ನೀಡಿದ ಬಳಿಕ ಶ್ವಾನದಳ ಮತ್ತು ಬೆರಳಚ್ಚು ತಜ್ಞರನ್ನು ಕರೆಸಿದ್ದೇನೆ ಎನ್ನುತ್ತಾರೆ. ಶ್ವಾನದಳದವರು ರಾತ್ರಿ 8.30 ಗಂಟೆಯಿಂದ 9.30 ಗಂಟೆಯವರೆಗೆ ಸ್ಥಳವನ್ನು ಪರಿಶೀಲಿಸಿದ್ದಾರೆ. ರಾತ್ರಿ 8.30 ಗಂಟೆಗೆ ಬೆರಳಚ್ಚು ತಜ್ಞರು ಬಂದಿದ್ದರು. ಸ್ಥಳಕ್ಕೆ ಶ್ವಾನದಳ ಮತ್ತು ಬೆರಳಚ್ಚು ತಜ್ಞರು ಬಂದಿದ್ದ ಬಗ್ಗೆ ನೀವು ಅವರ ಹೇಳಿಕೆಗಳನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಶ್ವಾನದಳದವರ ಪರಿಶೀಲನೆಯ ಬಗ್ಗೆ ನಾನು ಪಂಚನಾಮೆಯನ್ನು ಜರುಗಿಸಿಲ್ಲ.

31. ಕೃತ್ಯವಸಗಿದ್ದ ವ್ಯಕ್ತಿ ಅನಾಮಧೇಯ ಎಂದು ನಿಮಗೆ ತಿಳಿದು ಬಂತು ಎಂದರೆ ಸಾಕ್ಷಿ ಮೃತ ವ್ಯಕ್ತಿಯ ಜೊತೆಗಿದ್ದ ಮನು ಎಂಬಾತ ಆ ಸಮಯದಲ್ಲಿ ಇರಲಿಲ್ಲ, ಆತ ಮತ್ತು ಮೃತ ವ್ಯಕ್ತಿಯ ನಡುವೆ ಗಲಾಟೆಯಾಗಿದ್ದಾಗಿ ತಿಳಿದು ಬಂತು, ಹಾಗಾಗಿ ಆತನೇ ಕೃತ್ಯವೆಸಗಿರಬಹುದು ಎಂಬ ಅನುಮಾನ ಬಂತು ಎನ್ನುತ್ತಾರೆ. ಸ್ಥಳದಲ್ಲಿ ಆರೋಪಿಗೆ ಸಂಬಂಧಿಸಿದ ಯಾವುದಾದರೂ ವಸ್ತುಗಳನ್ನು ವಶಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆತನ ಮೊಬೈಲ್ ಕರೆಗಳ ವಿವರಗಳ ವರದಿಯನ್ನು ಪಡೆಯಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಕೃತ್ಯ ನಡೆದ ಸ್ಥಳದ ಮೊಬೈಲ್ ಟವರ್ ಲೊಕೇಷನಗಳನ್ನು ಪಡೆದು ಪರಿಶೀಲಿಸಲು

ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

32. ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡ ಕೂಡಲೇ ಅವುಗಳನ್ನು ಮಾಲುಪಟ್ಟಿಗೆ ಅಳವಡಿಸಿ ಅದನ್ನು ಪಂಚನಾಮೆಯೊಂದಿಗೆ ಯಾವುದೇ ವಿಳಂಬವಿಲ್ಲದೇ ನ್ಯಾಯಾಲಯಕ್ಕೆ ಸಲ್ಲಿಸಿಕೊಳ್ಳಬೇಕಾಗುತ್ತದೆ ಎಂದರೆ ಸರಿ. ದಿಃ 18-11-2021 ರಂದು ನೀವು ತನಿಖೆ ಕೈಗೊಂಡ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಮಾಲುಪಟ್ಟಿಯನ್ನು ದಿಃ 19-11-2021 ರಂದು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದೆನು ಎನ್ನುತ್ತಾರೆ. ಆ ಬಗ್ಗೆ ನೀವು ಸಲ್ಲಿಸಿರುವ ಮಾಲುಪಟ್ಟಿ ಯಾವುದು ಎಂದರೆ ಸಾಕ್ಷಿ ಠಾಣಾ ಮಾಲುಪಟ್ಟಿ ಸಂಖ್ಯೆ 369/2021 ಎನ್ನುತ್ತಾರೆ. ಅದನ್ನು ನಿಪಿ.39 ಎಂದು ಗುರುತಿಸಲಾಗಿರುತ್ತದೆ. ನಿಪಿ.39 ಕ್ಕೆ ಪಂಚರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿ. ನಿಪಿ.39 ರ ಜೊತೆ ಪಂಚನಾಮೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಆದರೆ ಆ ಸಮಯದಲ್ಲಿ ನಾವು ಕೂಡಲೇ ಪಂಚನಾಮೆಯನ್ನು ನ್ಯಾಯಾಲಯಕ್ಕೆ ಕಳುಹಿಸುತ್ತಿರಲಿಲ್ಲ, ಅಂತಿಮ ವರದಿಯೊಂದಿಗೆ ಸಲ್ಲಿಸಲಾಗುತ್ತಿತ್ತು ಎನ್ನುತ್ತಾರೆ.

33. ಪಂಚನಾಮೆಯಲ್ಲಿ ಫಿರ್ಯಾದಿಯ ವಿವರ, ದೂರಿನ ವಿವರ, ಮೊಕದ್ದಮೆ ಸಂಖ್ಯೆಯು ವಿವರಗಳನ್ನು ಬರೆಯಬೇಕಾಗುತ್ತದೆ ಎಂದರೆ ಸರಿ. ನಿಪಿ.2 ಪಂಚನಾಮೆಯಲ್ಲಿ ಮೊಕದ್ದಮೆ ಸಂಖ್ಯೆಯನ್ನು ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ದಿಃ 19-11-2021 ರಂದು ಬೆಳಿಗ್ಗೆ 9.30 ರಿಂದ

ಮಧ್ಯಾಹ್ನ 12 ಗಂಟೆಯವರೆಗೆ ಬರೆಯಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸದರಿ ಪಂಚನಾಮೆಯನ್ನು ದಿಃ 18-11-2021 ರಂದು ರಾತ್ರಿ 9.45 ಗಂಟೆಯಿಂದ ಮಧ್ಯರಾತ್ರಿ 12 ಗಂಟೆಯವರೆಗೆ ವಿದ್ಯುತ್ ಬೆಳಕಿನಲ್ಲಿ ಜರುಗಿಸಿದ್ದೇನೆ, ಆ ಬಗ್ಗೆ ಕೇಸ್ ಡೈರಿಯಲ್ಲಿ, ನ್ಯಾಯಾಲಯಕ್ಕೆ ಸಲ್ಲಿಸಲಾದ ರಿಮ್ಯಾಂಡ್ ಅರ್ಜಿಯಲ್ಲಿ ಮತ್ತು ನಿಪಿ.39 ಮಾಲುಪಟ್ಟಿಯಲ್ಲಿ ನಮೂದು ಮಾಡಲಾಗಿದೆ ಎನ್ನುತ್ತಾರೆ.

34. ನಿಪಿ.2 ರಲ್ಲಿ ದೂರಿನ ವಿವರಗಳಿರುವುದು ಮತ್ತು ಸ್ಥಳದಲ್ಲಿ ಕಂಡುಬಂದ ವಿವರಗಳಿರುವುದು ಕಂಡುಬರುತ್ತದೆ ಎಂದರೆ ಸರಿ. ನಾನು ಸುರೇಶ್ ಮತ್ತು ಮುರುಳಿ ಎಂಬುವವರ ಸಮಕ್ಷಮ ಸ್ಥಳದಲ್ಲಿ ಮಹಜರ್ ಜರುಗಿಸಿದ್ದೇನೆ. ನಿಪಿ.2 ರಲ್ಲಿ ಮೃತ ದೇಹವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಾಗಿಸುವ ಸಂಬಂಧ ಸ್ಥಳಕ್ಕೆ ಒಂದು ಆಂಬ್ಯುಲೇನ್ಸನ್ನು ಕರೆಸಿ ಸ್ಥಳದಿಂದ ಮೃತ ದೇಹವನ್ನು ಸಾಗಿಸಿ ಸದರಿ ಮಹಜರನ್ನು ಬೆಳಿಗ್ಗೆ 9.30 ಗಂಟೆಯಿಂದ ಬೆಳಿಗ್ಗೆ 12 ಗಂಟೆಯವರೆಗೆ ಜರುಗಿಸಿರುತ್ತೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಸದರಿ ದಾಖಲೆಯಲ್ಲಿ ಆ ರೀತಿ ಇದೆ, ಅದು ನಾನು ಜರುಗಿಸಿದ ಪಂಚನಾಮೆ ಅಲ್ಲ, ನಾನು ಪಂಚನಾಮೆಯನ್ನು ಜರುಗಿಸಿದ್ದು ದಿಃ 18-11-2021 ರಂದು ರಾತ್ರಿ 9.45 ರಿಂದ ಮಧ್ಯರಾತ್ರಿ 12 ಗಂಟೆಯವರೆಗೆ ಜರುಗಿಸಿದ್ದೇನೆ, ಗೋಡೆಯ ಮೇಲಿದ್ದ ರಕ್ತದ ಕಲೆಗಳನ್ನು ತೆಗೆಯುವ ಸಲುವಾಗಿ ಶವವನ್ನು ರಾತ್ರಿ 10.30 ಗಂಟೆ ಸುಮಾರಿಗೆ ಆಂಬ್ಯುಲೇನ್ಸ ಕರೆಸಿ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದ್ದೇನೆ ಎನ್ನುತ್ತಾರೆ.

35. ದಿಃ 11-02-2026 ರಂದು ನಿಮ್ಮ ಮುಖ್ಯ ವಿಚಾರಣೆಯ ಸಮಯದಲ್ಲಿ ನೀವು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸಾಕ್ಷಿ ದಾಖಲೆಗಳನ್ನು ಪರಿಶೀಲಿಸಿದ್ದೇನೆ ಆದರೆ ಆ ದಿನ ಕೇಸ್ ಫೈಲ್‌ನಲ್ಲಿ ಠಾಣಾ ದಿನಚರಿ ಇರಲಿಲ್ಲ ಅದನ್ನು ಈ ದಿನ ಪರಿಶೀಲಿಸಿದ್ದೇನೆ ಎನ್ನುತ್ತಾರೆ.

36. ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ 3 ರಲ್ಲಿ ದಿಃ 19-11-2021 ರಂದು ಮೃತರ ತಂದೆಯಾದ ಪ್ರಾಸಾ.2 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಪ್ರಾಸಾ.16 ರವರು ಪ್ರಕರಣವನ್ನು ದಾಖಲಿಸಿ ಕಡತವನ್ನು ತನಿಖೆಗಾಗಿ ನನಗೆ ನೀಡಿರುತ್ತಾರೆ ಎಂದು ನುಡಿದಿದ್ದೀರಿ ಮತ್ತು ಖಂಡಿಕೆ 4 ರಲ್ಲಿ ಅದೇ ದಿನ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ನಿಪಿ.1 ಮತ್ತು ಪಿ.11 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನು ಬರಮಾಡಿಕೊಂಡಿದ್ದಾಗಿ, ನಿಪಿ.2 ರಂತೆ ಮಹಜರನ್ನು ಜರುಗಿಸಿದ್ದಾಗಿ ಹೇಳಿದ್ದೀರಿ ಆ ರೀತಿ ಹೇಳಿರುವುದು ಸುಳ್ಳೇ ಎಂದರೆ ಸಾಕ್ಷಿ ಆ ದಿನ ಕಡತದಲ್ಲಿದ್ದ ದಾಖಲೆಗಳನ್ನು ಪರಿಶೀಲಿಸಿ ಆ ರೀತಿ ಸಾಕ್ಷ್ಯ ನುಡಿದಿದ್ದೇನೆ ಎನ್ನುತ್ತಾರೆ. ಹಾಗಿದಲ್ಲಿ ದಿಃ 19-11-2021 ರಂದು ನಿಪಿ.2 ರಂತೆ ಮಹಜರನ್ನು ಜರುಗಿಸಿದ್ದಾಗಿ ಹೇಳಿರುವುದು ಸುಳ್ಳೇ ಎಂದರೆ ಸಾಕ್ಷಿ ಆ ದಿನ ಕೇಸ್ ಡೈರಿಯನ್ನು ಪರಿಶೀಲಿಸದೇ ಕಡತದಲ್ಲಿದ್ದ ದಾಖಲೆಯ ಮೇರೆಗೆ ಆ ರೀತಿ ಸಾಕ್ಷ್ಯ ನುಡಿದಿದ್ದೇನೆ ಎನ್ನುತ್ತಾರೆ.

37. ದಿಃ 18-11-2021 ರಂದು ನೀವು ಪಂಚನಾಮೆಯನ್ನು ಜರುಗಿಸಿ ವಸ್ತುಗಳನ್ನು ಅಮಾನತುಪಡಿಸಿಕೊಂಡ ಬಗ್ಗೆ ಯಾವ

ದಿನಾಂಕದಂದು ಮಾಲುಪಟ್ಟಿಯನ್ನು ತಯಾರಿಸಿದ್ದೀರಿ ಎಂದರೆ ಸಾಕ್ಷಿ ದಿಃ 19-11-2021 ರಂದು ನಿಪಿ.39 ರಂತೆ ಎನ್ನುತ್ತಾರೆ. ನಾನು ಮುದ್ದೆಮಾಲುಗಳನ್ನು ಅಮಾನತುಪಡಿಸಿಕೊಳ್ಳುವ ಕಾಲಕ್ಕೆ ಪ್ರಕರಣ ದಾಖಲಾಗಿರಲಿಲ್ಲ. ಪಂಚರ ಸಮಕ್ಷಮ ನೀವು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

38. ಶವ ದೊರೆತ ಸ್ಥಳದಲ್ಲಿಯೇ ಆದಷ್ಟು ಬೇಗ ಶವ ತನಿಖೆಯನ್ನು ಕೈಗೊಳ್ಳಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಗ ಆವೇಳೆಯಾಗಿದ್ದರಿಂದ ಮತ್ತು ಮೃತನ ತಂದೆ ಬೆಳಿಗ್ಗೆ ಬಂದು ದೂರು ನೀಡುವುದಾಗಿ ಹೇಳಿದ್ದರಿಂದ ಶವವನ್ನು ಶವಗಾರಕ್ಕೆ ಸಾಗಿಸಿದ್ದೇನೆ ಎನ್ನುತ್ತಾರೆ. ದಿಃ 19-11-2021 ರಂದು ನೀವು ಸ್ಥಳದಲ್ಲಿ ಯಾವುದೇ ಫೋಟೋಗಳನ್ನು ತೆಗೆಸಿಲ್ಲ ಮತ್ತು ವಿಡಿಯೋ ಚಿತ್ರಿಕರಿಸಿಲ್ಲ ಎಂದರೆ ಸಾಕ್ಷಿ ಆ ದಿನ ಮಾಡಿಲ್ಲ ಆದರೆ ದಿಃ 18-11-2021 ರಂದು ರಾತ್ರಿ ಪಂಚನಾಮೆ ಜರುಗಿಸುವ ಕಾಲಕ್ಕೆ ತೆಗೆಸಿದ್ದೇನೆ ಎನ್ನುತ್ತಾರೆ.

39. ನಿಪಿ.2 ಪಂಚನಾಮೆಯ ಕಾಲಕ್ಕೆ ಅಮಾನತು ಪಡಿಸಿಕೊಳ್ಳಲಾಗಿದೆ ಎಂದು ಹೇಳಲಾದ ಮುದ್ದೆಮಾಲುಗಳ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿ ದಿನಾಂಕವನ್ನು 19-11-2021 ಎಂದು ಬರೆಯಲಾಗಿದೆ ಮತ್ತು ಅದರ ಮೇಲೆ ಮೊಕದ್ದಮೆ ಸಂಖ್ಯೆಯನ್ನು ಸಹ ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಅವುಗಳನ್ನು ದಿಃ 18-11-2021 ರಂದೇ ಅಮಾನತು ಪಡಿಸಿಕೊಂಡಿದ್ದೇನೆ, ಆದರೆ ಕೈತಪ್ಪಿನಿಂದ ದಿನಾಂಕವನ್ನು 19-11-2021 ಎಂದು ಬರೆಯಲಾಗಿದೆ ಎನ್ನುತ್ತಾರೆ. ಅವುಗಳ

ಮೇಲೆ ಮೊಕದ್ದಮೆ ಸಂಖ್ಯೆಯನ್ನು ಸಹ ಬರೆಯಲಾಗಿದೆ ಎಂದರೆ ಸರಿ. ಆ ಸಮಯಕ್ಕೆ ದೂರು ದಾಖಲಾಗಿರಲಿಲ್ಲ ಎಂದರೆ ಸಾಕ್ಷಿ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಲ್ಲಿಯವರೆಗೆ ಮೊಕದ್ದಮೆ ಸಂಖ್ಯೆ.351 ರವರೆಗೆ ಪ್ರಕರಣ ದಾಖಲಾಗಿದ್ದವು ಆದ್ದರಿಂದ ಮುಂದಿನ ಸಂಖ್ಯೆ ಅಂದರೆ ಮೊಕದ್ದಮೆ ಸಂಖ್ಯೆ.352 ನ್ನು ನಾನು ನಮೂದು ಮಾಡಿದ್ದೇನೆ ಎನ್ನುತ್ತಾರೆ. ಯಾವುದೇ ದಾಖಲೆಯನ್ನು ತಯಾರಿಸಿದ ಬಳಿಕ ಅದನ್ನು ತಿದ್ದುಪಡಿ ಮಾಡುವುದು, ಸೇರಿಸುವುದು ಅಪರಾಧವಾಗುತ್ತದೆ ಎಂದರೆ ಸರಿ.

40. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯ ನುಡಿದ ಬಳಿಕ ನ್ಯಾಯಾಲಯಕ್ಕೆ ಆಸ್ಪತ್ರೆಯಿಂದ Brought dead register ನ ದೃಢೀಕೃತ ಪ್ರತಿಯನ್ನು ತರಿಸಿದ್ದು ಅದರಲ್ಲಿ ಶವವನ್ನು ದಿಃ 18-11-2021 ರಂದು ರಾತ್ರಿ 10.45 ಗಂಟೆಗೆ ಸಾಗಿಸಲಾಗಿದೆ ಎಂದು ನಮೂದಾಗಿರುವ ಕಾರಣ ಈ ದಿನ ನಿಮ್ಮ ಪಾಟೀ ಸವಾಲಿನಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಿಃ 18-11-2021 ರಂದೇ ನಾನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಕರ್ತವ್ಯನಿರತ ವೈದ್ಯಾಧಿಕಾರಿಗಳಿಗೆ ಶವವನ್ನು ಸದರಿ ಆಸ್ಪತ್ರೆಯ ಶವಗಾರದಲ್ಲಿ ಇರಿಸುವ ಬಗ್ಗೆ ಮನವಿ ಸಲ್ಲಿಸಿದ್ದೆನು ಎನ್ನುತ್ತಾರೆ.

41. ನೀವು ಸ್ಥಳಕ್ಕೆ ಭೇಟಿ ನೀಡಿದ ಕಾಲಕ್ಕೆ ಮನು ಎಂಬುವವನ ಮೇಲೆ ಅನುಮಾನ ಇದ್ದುದ್ದಾಗಿ ಹೇಳಿದ್ದೀರಿ ಆದರೆ ನೀವು ಸಲ್ಲಿಸಿರುವ ನಿಪಿ.2 ಮನವಿಯಲ್ಲಿ ಆತನ ಬಗ್ಗೆ ನಮೂದಿಸಿಲ್ಲ ಎಂದರೆ

ಸಾಕ್ಷಿ ಆತನ ವಿವರಗಳನ್ನು ನಮೂದಿಸಿಲ್ಲ ಆದರೆ ಮೃತನ ಕೊಲೆಯಾಗಿದೆ ಎಂದು ನಮೂದಿಸಿದ್ದೇನೆ ಎನ್ನುತ್ತಾರೆ.

42. ನಿಪಿ.2 ಪಂಚನಾಮೆಯಲ್ಲಿ ನಿಮ್ಮ ಸಹಿಯ ಕಳಗೆ ದಿನಾಂಕವನ್ನು ನಮೂದಿಸಿದ್ದೀರಿ ಎಂದರೆ ಸರಿ. ಸಂಜ್ಞೇಯ ಅಪರಾಧದ ಬಗ್ಗೆ ಮಾಹಿತಿ ಬಂದಾಗ ಪ್ರಕರಣವನ್ನು ದಾಖಲಿಸದೇ ತನಿಖೆಯನ್ನು ಕೈಗೊಳ್ಳಬಾರದು ಎಂಬ ನಿರ್ದೇಶನಗಳು ಇದೆ ಎಂದರೆ ಸಾಕ್ಷಿ ಸಾಕ್ಷ್ಯವನ್ನು ಸಂರಕ್ಷಿಸುವ ಸಲುವಾಗಿ ತನಿಖೆಯನ್ನು ಕೈಗೊಳ್ಳಬಹುದು ಎನ್ನುತ್ತಾರೆ. ಸಾಕ್ಷ್ಯ ಸಂಗ್ರಹ ಮಾಡುವುದು ತನಿಖೆಯ ಭಾಗವಾಗಿದೆ ಎಂದರೆ ಸರಿ.

43. ನೀವು ಹೇಳಿದಂತೆ ಯಾವುದೇ ಶವ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಆ ಸಮಯದಲ್ಲಿ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ವಾಸವಾಗಿದ್ದ ಮನೆಯ ಅಕ್ಕಪಕ್ಕದಲ್ಲಿ ವಾಸವಾಗಿದ್ದ ಕೂಲಿ ಕಾರ್ಮಿಕರನ್ನು ವಿಚಾರಿಸಿ ಅವರ ಹೇಳಿಕೆಗಳನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಮನೆಯ ಅಕ್ಕಪಕ್ಕದಲ್ಲಿ ಯಾರು ವಾಸವಾಗಿದ್ದರು ಎಂದು ನಿಮ್ಮ ಕೇಸ್ ಡೈರಿಯಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮೃತ ವ್ಯಕ್ತಿಯ ಊರಿಗೆ ಹೋಗಿ ಆತನ ಬಗ್ಗೆ ವಿವರಗಳನ್ನು ಸಂಗ್ರಹಿಸಿಲ್ಲ. ಎಸ್ಟೇಟಿನ ಮಾಲೀಕರು ಕೂಲಿ ಕಾರ್ಮಿಕರರಿಗೆ ಸಂಬಂಧಿಸಿದಂತೆ ನಿರ್ವಹಿಸುತ್ತಿದ್ದ ರಿಜಿಸ್ಟರನ್ನು ಮತ್ತು ದಾಖಲೆಗಳನ್ನು ನೀವು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ವಿಡಿಯೋ ಕಾನ್ಪರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

44. ಶವವನ್ನು ಶೈಥ್ಯಾಗಾರದಲ್ಲಿ ಇರಿಸಲು ನೀವು ಮನವಿಯಲ್ಲಿ ಕೋರಿದ್ದೀರಾ ಎಂದರೆ ಸಾಕ್ಷಿ ನಿರ್ದಿಷ್ಟವಾಗಿ ಕೋರಿಲ್ಲ ಆದರೆ ಶವಗಾರದಲ್ಲಿ ಇರಿಸಿ ಎಂದು ಕೋರಿದಾಗ ವೈದ್ಯರು ಶವವನ್ನು ಶೈಥ್ಯಾಗಾರದಲ್ಲೇ ಇರಿಸುತ್ತಾರೆ ಎನ್ನುತ್ತಾರೆ. ವೈದ್ಯರಿಗೆ ಸಲ್ಲಿಸಿದ ಮನವಿಯಲ್ಲಿ ಮೃತನ ಮಾದರಿ ರಕ್ತವನ್ನು ಸಂಗ್ರಹಿಸುವಂತೆ ಕೋರಿದ್ದೇನೆ. ಮೃತ ವ್ಯಕ್ತಿಯ ರಕ್ತವನ್ನು ಸಂಗ್ರಹಿಸಬಾರದೆಂದು ನಿರ್ದೇಶನವಿದೆ ಎಂದರೆ ಸರಿಯಲ್ಲ.

45. ಆರೋಪಿಯ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿ ಕಳುಹಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ.9 ಮತ್ತು ಪ್ರಾಸಾ.4 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ಫೋಟೋ ಅಥವಾ ಆತನ ಚಹರೆಯ ವಿವರಗಳು ನಿಮ್ಮ ಬಳಿ ಇತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆತನ ಹೆಸರು ಮತ್ತು ವಿಳಾಸ ಗೊತ್ತಿತ್ತು ಎನ್ನುತ್ತಾರೆ. ಸದರಿ ವಿವರಗಳನ್ನು ಯಾರು ಕೊಟ್ಟರು ಎಂದರೆ ಸಾಕ್ಷಿ ತೋಟದ ಮಾಲೀಕರು ಎನ್ನುತ್ತಾರೆ. ಆರೋಪಿಯ ಪತ್ತೆಗಾಗಿ ಚಾಸಾ.26 ಮತ್ತು ಚಾಸಾ.27 ರವರನ್ನು ಲಿಖಿತವಾಗಿ ಆದೇಶಿಸಿ ನೇಮಿಸಿದ್ದೀರಾ ಎಂದರೆ ಸಾಕ್ಷಿ ಮೌಖಿಕವಾಗಿ ಆದೇಶಿಸಿದ್ದೆನು ಎನ್ನುತ್ತಾರೆ.

46. ಮೃತ ವ್ಯಕ್ತಿ ವಾಸವಾಗಿದ್ದ ಮನೆಯನ್ನು ನೀವು ಸಂಪೂರ್ಣವಾಗಿ ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಸಂಪೂರ್ಣವಾಗಿ ಪರಿಶೀಲಿಸಿಲ್ಲ, ಶವ ದೊರೆತ ಸ್ಥಳ ಮತ್ತು ಅದರ ಅಕ್ಕಪಕ್ಕದಲ್ಲಿ ಪರಿಶೀಲಿಸಿದ್ದೇನೆ ಅಷ್ಟೇ ಎನ್ನುತ್ತಾರೆ. ಚಾಸಾ.26 ಮತ್ತು ಚಾಸಾ.27 ರವರು ಆರೋಪಿಯ ಪತ್ತೆಗಾಗಿ ಯಾವ, ಯಾವ ಸ್ಥಳಗಳಲ್ಲಿ ಚಲಿಸಿದ್ದರು ಎನ್ನುವ ಬಗ್ಗೆ ನಿಮಗೆ ನೋಟ್‌ನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಯಾವ, ಯಾವ ಸ್ಥಳಗಳಿಗೆ ಹೋಗಿದ್ದರು ಎಂದು ವರದಿ ನೀಡಿದ್ದಾರೆ ಎನ್ನುತ್ತಾರೆ. ಶವ ಇದ್ದ ಸ್ಥಳದಿಂದ ಆರೋಪಿಯನ್ನು ವಶಕ್ಕೆ ಪಡೆಯಲಾಯಿತು ಎನ್ನಲಾದ ಸ್ಥಳಕ್ಕೆ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿ ನನಗೆ ನಿಖರವಾಗಿ ಗೊತ್ತಿಲ್ಲ ಎನ್ನುತ್ತಾರೆ.

47. ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆಯುವ ಕಾಲಕ್ಕೆ ಅದರ ಪರಿಣಾಮವನ್ನು ನೀವು ಆರೋಪಿಗೆ ವಿವರಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದನ್ನು ನೀವು ಆತನಿಗೆ ವಿವರಿಸಿದ ಬಗ್ಗೆ ಆತನ ಸ್ವಇಚ್ಛಾ ಹೇಳಿಕೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನೀವು ಹೇಳಿದಂತೆ ಆರೋಪಿ ನಿಮಗೆ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.43(ಬಿ) ಸಹಿಯನ್ನು ಆರೋಪಿ ಸ್ವಇಚ್ಛೆಯಿಂದ ಮಾಡಿಲ್ಲ ಎಂದರೆ ಸರಿಯಲ್ಲ.

48. ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಅಕ್ಕಪಕ್ಕದಲ್ಲಿ ಗೌರವಾನ್ವಿತ ವ್ಯಕ್ತಿಗಳು ವಾಸವಾಗಿದ್ದಾರೆ ಎಂದರೆ ಸಾಕ್ಷಿ ಅಲ್ಲಿ ವಾಸದ ಮನೆಗಳಿವೆ ಎನ್ನುತ್ತಾರೆ. ಹಿರೇಕೊಳಲೆಗಿಂತ ಮೊದಲೇ ಕಬ್ಬಿನಹಳ್ಳಿ ಸಿಗುತ್ತದೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಕೃತ್ಯ

ನಡೆದ ಸ್ಥಳದಿಂದ ಹಿರೇಕೊಳಲೆ ಗ್ರಾಮ ಪಂಚಾಯ್ತಿಗೆ ಸುಮಾರು 3 ಕಿ.ಮೀ ದೂರವಾಗುತ್ತದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಕಬ್ಬಿನಹಳ್ಳಿ ಗ್ರಾಮದಲ್ಲಿ ಸಾಕಷ್ಟು ವಾಸದ ಮನೆಗಳು ಇವೆ ಎಂದರೆ ಸರಿ. ನಿಮ್ಮ ಠಾಣೆಯ ಅಕ್ಕಪಕ್ಕದಲ್ಲಿ ವಾಸವಾಗಿದ್ದವರನ್ನು ಪಂಚರನ್ನಾಗಿ ಕರೆದುಕೊಂಡು ಹೋಗಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಸರ್ಕಾರಿ ನೌಕರರು ಬೇಕು ಎಂದು ಹಿರೇಕೊಳಲೆ ಪಂಚಾಯ್ತಿಯ ನೌಕರರನ್ನು ಕರೆಸಿಕೊಂಡಿದ್ದೇನೆ ಎನ್ನುತ್ತಾರೆ. ಪಂಚನಾಮೆಗೆ ಸ್ವತಂತ್ರ ಮತ್ತು ಗೌರವಾನ್ವಿತ ವ್ಯಕ್ತಿಗಳನ್ನು ಪಂಚರನ್ನಾಗಿ ಕರೆಸಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ವತಂತ್ರ ವ್ಯಕ್ತಿಗಳು ತನಿಖೆಗೆ ಸಹಕರಿಸಲು ಮುಂದೆ ಬರುವುದಿಲ್ಲ, ಹಾಗಾಗಿ ಸರ್ಕಾರಿ ನೌಕರರನ್ನು ಕರೆಸಿಕೊಳ್ಳಬೇಕಾಗುತ್ತದೆ ಎನ್ನುತ್ತಾರೆ. ನೀವು ಯಾವುದಾದರೂ ಸ್ವತಂತ್ರ ವ್ಯಕ್ತಿಗಳಿಗೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬನ್ನಿ ಎಂದು ಕರೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

49. ಪ್ರಾಸಾ.7 ಮತ್ತು ಚಾಸಾ.13 ರವರು ನಿಪಿ.15 ಪಂಚನಾಮೆಗೆ ಸಹಕರಿಸಿದ್ದಾರೆ ಎಂದು ತೋರಿಸಲು ನೀವು ಅವರ ಕಛೇರಿಗೆ ಸಂಬಂಧಿಸಿದ ನಡವಳಿಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರಾಸಾ.7 ಮತ್ತು ಚಾಸಾ.13 ರವರ ಸಮಕ್ಷಮ ಆರೋಪಿಯಿಂದ ಮು.ಮಾ.8 ರಿಂದ ಮು.ಮಾ.11 ನ್ನು ಅಮಾನತುಪಡಿಸಿಕೊಂಡಿದ್ದಾಗಿ ಆ ಬಗ್ಗೆ ನಿಪಿ.15 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮು.ಮಾ.8 ರಿಂದ ಮು.ಮಾ.11 ರ ಮೇಲೆ ಪಂಚರ

ಸಹಿಗಳನ್ನು ಪಡೆದಿಲ್ಲ ಎಂದರೆ ಸಾಕ್ಷಿ ವಸ್ತುಗಳ ಮೇಲೆ ಪಡೆದಿಲ್ಲ ಆದರೆ ಅವುಗಳ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ಪಡೆದಿದ್ದೇನೆ ಎನ್ನುತ್ತಾರೆ. ನಿಪಿ.15 ಪಂಚನಾಮೆಯ ಕಾಲಕ್ಕೆ ನಾನು ತನಿಖಾಧಿಕಾರಿಗಳ ಕಿಟ್‌ನ್ನು ತೆಗೆದುಕೊಂಡು ಹೋಗಿದ್ದೆನು.

50. ನಿಪಿ.17 ಫೋಟೋದಲ್ಲಿ ಕಂಡುಬರುವ ಮನೆಯ ಕೆಳಗೆ ನಿಂತು ನೋಡಿದರೆ ಮೇಲ್ಭಾಗದಲ್ಲಿರುವುದು ಕಂಡುಬರುತ್ತದೆ ಎಂದರೆ ಸರಿ. ನಾನು ಸ್ಥಳ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಮನೆಯ ಹಿಂಭಾಗವನ್ನು ಪರಿಶೀಲಿಸಿರಲಿಲ್ಲ. ಶ್ವಾನದಳದಲ್ಲಿದ್ದ ಶ್ವಾನಗಳು ಸದರಿ ಮನೆಯ ಹಿಂಭಾಗ ಮತ್ತು ಮುಂಭಾಗ ಓಡಾಡಿದ್ದವೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಶ್ವಾನಗಳು ವಾಸನೆಯ ಮೂಲಕ ಕಂಡು ಹಿಡಿಯುತ್ತವೆ ಎಂದರೆ ಸರಿ. ಶ್ವಾನಗಳು ಏನ್ನನ್ನು ಗುರುತಿಸುತ್ತವೆಯೋ ಅದರ ಮೇಲೆ ಶ್ವಾನದಳದ ಅಧಿಕಾರಿಗಳು ಪರಿಶೀಲನೆ ಮಾಡುತ್ತಾರೆ ಎಂದರೆ ಸರಿ.

51. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಕಾಲಕ್ಕೆ ಅಲ್ಲಿಯವರೆಗೆ ಆದ ತನಿಖೆಯ ಬಗ್ಗೆ ಸಂಕ್ಷಿಪ್ತವಾಗಿ ರಿಮ್ಯಾಂಡ್ ಅರ್ಜಿಯಲ್ಲಿ ನಮೂದಿಸಲಾಗುತ್ತದೆ ಎಂದರೆ ಸರಿ. ನಿಪಿ.15 ಪಂಚನಾಮೆಯ ಕಾಲಕ್ಕೆ ಅಮಾನತುಪಡಿಸಿಕೊಂಡ ವಸ್ತುಗಳನ್ನು ನಿಪಿ.45 ಠಾಣಾ ಮಾಲುಪಟ್ಟಿ ಸಂಖ್ಯೆ.371/2021 ರಲ್ಲಿ ದಿಃ 20-11-2021 ರಂದು ಅಳವಡಿಸಿಕೊಂಡಿದ್ದೇನೆ. ಅವುಗಳನ್ನು ಯಾವ ದಿನಾಂಕದಂದು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಮಾಲುಪಟ್ಟಿಗೆ ಅಳವಡಿಸಿದ ದಿನದಂದೇ ಸಿಬ್ಬಂದಿಗೆ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಕೊಟ್ಟಿದ್ದೇನೆ, ಅದು

ದಿಃ 23-11-2021 ರಂದು ನ್ಯಾಯಾಲಯದಲ್ಲಿ ಸ್ವೀಕೃತಗೊಂಡಿರುತ್ತದೆ ಎನ್ನುತ್ತಾರೆ. ನಿಪಿ.45 ರೊಂದಿಗೆ ನಿಪಿ.15 ಪಂಚನಾಮೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ, ಆದರೆ ಆ ಸಮಯದಲ್ಲಿ ನಾವು ಕೂಡಲೇ ಪಂಚನಾಮೆಯನ್ನು ನ್ಯಾಯಾಲಯಕ್ಕೆ ಕಳುಹಿಸುತ್ತಿರಲಿಲ್ಲ, ಅಂತಿಮ ವರದಿಯೊಂದಿಗೆ ಸಲ್ಲಿಸಲಾಗುತ್ತಿತ್ತು ಬಿ.ಎನ್.ಎಸ್.ಎಸ್. ಜಾರಿಗೆ ಬಂದ ಬಳಿಕ ಕೂಡಲೇ ನ್ಯಾಯಾಲಯಕ್ಕೆ ಸಲ್ಲಿಸಿಕೊಳ್ಳುತ್ತಿದ್ದೇವೆ ಎನ್ನುತ್ತಾರೆ.

52. ನೀವು ನ್ಯಾಯಾಲಯಕ್ಕೆ ಸಲ್ಲಿಸಿದ ರಿಮ್ಯಾಂಡ್ ಅರ್ಜಿಯಲ್ಲಿ ಆರೋಪಿಯನ್ನು ಎಲ್ಲಿ, ಯಾವಾಗ ವಶಕ್ಕೆ ಪಡೆಯಲಾಯಿತು ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಅದರಲ್ಲಿ ನಮೂದು ಮಾಡಿಲ್ಲ, ಆದರೆ ರಿಮ್ಯಾಂಡ್ ಅರ್ಜಿಯೊಂದಿಗೆ ಸಲ್ಲಿಸಲಾಗಿರುವ ಪೂರಕ ದಾಖಲೆಗಳಲ್ಲಿ ಎಲ್ಲಾ ವಿವರಗಳು ಇವೆ ಎನ್ನುತ್ತಾರೆ. ರಿಮ್ಯಾಂಡ್ ಅರ್ಜಿಯಲ್ಲಿ ಪಂಚನಾಮೆಗೆ ಸಹಕರಿಸಿದ ವ್ಯಕ್ತಿಗಳ ಹೆಸರು ಮತ್ತು ಯಾವ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಳ್ಳಲಾಗಿದೆ ಎಂಬ ವಿವರಗಳನ್ನು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಅದರಲ್ಲಿ ವಿವರಗಳನ್ನು ಕೇವಲ ಸಂಕ್ಷೀಪ್ತವಾಗಿ ನಮೂದು ಮಾಡಲಾಗಿದೆ ಎನ್ನುತ್ತಾರೆ.

53. ಅಂತಿಮ ವರದಿಯನ್ನು ಸಲ್ಲಿಸುವ ಪೂರ್ವದಲ್ಲಿ ನೀವು ಜರುಗಿಸಿದ ಯಾವುದೇ ಪಂಚನಾಮೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಿಮ್ಮ ಅನುಕೂಲಕ್ಕೆ ತಕ್ಕಂತೆ ಎಲ್ಲಾ

ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ. ನಿಪಿ.15 ದಾಖಲೆಗೆ ಆರೋಪಿಯ ಸಹಿಯನ್ನು ಪಡೆದು ಆತನ ಸಂವಿಧಾನಾತ್ಮಕ ಹಕ್ಕಿಗೆ ಧಕ್ಕೆ ತಂದಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಅನುಕೂಲಕ್ಕೆ ತಕ್ಕಂತೆ ಸದರಿ ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ.

54. ನಿಪಿ.38 ಮತ್ತು ಪಿ.46 ದಾಖಲೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ.48 ರಂತೆ ಮರಣೋತ್ತರ ಪರೀಕ್ಷಾ ವರದಿಯನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ.51 ರಂತೆ ವರದಿಯನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಿಃ 18-11-2021 ರಂದು ರಾತ್ರಿ ನಾನು ಘಟನಾ ಸ್ಥಳದಲ್ಲಿ ವಿದ್ಯುತ್ ಬೆಳಕಿನಲ್ಲಿ ಪಂಚನಾಮೆಯನ್ನು ಜರುಗಿಸಿದ್ದೆನು ಹಾಗಾಗಿ ಆ ಸಮಯದಲ್ಲಿ ಸ್ಥಳದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಚಾಸಾ.23 ರವರಿಂದ ನಿಪಿ.51 ರಂತೆ ವರದಿ ಪಡೆದಿದ್ದೇನೆ ಎನ್ನುತ್ತಾರೆ.

55. ನಿಮ್ಮ ತನಿಖಾ ಕಾಲದಲ್ಲಿ ಫೋಟೋ ತೆಗೆದು ವಿಡಿಯೋ ಚಿತ್ರಿಕರಿಸಿದ ಸಿಬ್ಬಂದಿಗಳಿಗೆ ಯಾವ ಸಮಯದಲ್ಲಿ ಅವುಗಳನ್ನು ತೆಗೆಯಲಾಯಿತು ಎನ್ನುವ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ನನ್ನ ತನಿಖಾ ಕಾಲದಲ್ಲಿ ವೈದ್ಯರಿಂದ ಮರಣೋತ್ತರ ಪರೀಕ್ಷಾ ವರದಿಯಲ್ಲಿ ನಮೂದು ಮಾಡಿದ ಗಾಯಗಳು ಯಾವ ಆಯುಧದಿಂದ ಹಲ್ಲೆ ಮಾಡಿದರೆ ಆಗುತ್ತದೆ ಎಂದು ವರದಿಯನ್ನು

ಪಡೆದಿಲ್ಲ. ಮೃತ ವ್ಯಕ್ತಿಯ ಅಣ್ಣತಮ್ಮಂದಿರ ಹೇಳಿಕೆಗಳನ್ನು ನಾನು ಪಡೆದಿಲ್ಲ. ಮೃತನ ಸಹೋದರ ಸಹ ಕೊಲೆಯಾಗಿದ್ದ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮೃತನ ಸಹೋದರನ ಕೊಲೆಗೆ ಕಾರಣರಾದವರೇ ಮೃತನ ಕೊಲೆಗೂ ಕಾರಣರಾಗಿದ್ದು ನಿಮಗೆ ತಿಳಿದು ಬಂತು ಎಂದರೆ ಸರಿಯಲ್ಲ. ತನ್ನ ಸಹೋದರನು ಕೊಲೆಯಾಗಿದ್ದ ಕಾರಣಕ್ಕೆ ಮೃತ ಶೇಷಪ್ಪ ಯಾರಿಗೂ ತಿಳಿಯಬಾರದೆಂದು ಕಬ್ಬಿನಹಳ್ಳಿಯಲ್ಲಿರುವ ಫ್ರಾಸಾ.8 ಮತ್ತು ಫ್ರಾಸಾ.9 ರವರ ಎಸ್ಟೇಟಿನಲ್ಲಿ ವಾಸವಾಗಿದ್ದನು ಎಂದರೆ ಸರಿಯಲ್ಲ. ತಮ್ಮ ಎಸ್ಟೇಟಿನಲ್ಲಿ ಶೇಷಪ್ಪನ ಕೊಲೆಯಾಗಿದ್ದನು ಬಳಸಿಕೊಂಡು ಫ್ರಾಸಾ.8 ಮತ್ತು 9 ರವರು ಹಿಂದೆ ತಮ್ಮ ಮತ್ತು ಆರೋಪಿಯ ನಡುವೆ ಕೂಲಿ ಹಣದ ವಿಚಾರಕ್ಕೆ ಇದ್ದ ವೈಮನಸ್ಸಿನಿಂದ ಆರೋಪಿಯ ವಿರುದ್ಧ ಈ ಪ್ರಕರಣ ದಾಖಲಾಗುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನೀವು ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಫ್ರಾಥಮಿಕ ಮಾಹಿತಿಯನ್ನು ಮರೆಮಾಚಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಫ್ರಾಸಾ.8 ಮತ್ತು 9 ರವರ ಎಸ್ಟೇಟಿನಲ್ಲಿ ವಾಸವಾಗಿರಲಿಲ್ಲ ಮತ್ತು ಈ ಪ್ರಕರಣದ ಬಗ್ಗೆ ಆತನಿಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

56. ಮು.ಮಾ.8 ಮತ್ತು 9 ಕ್ಕೂ ಮೃತನ ಮೈಮೇಲೆ ಆದ ಗಾಯಗಳಿಗೂ ಯಾವುದೇ ಸಂಬಂಧವಿಲ್ಲ ಬೇರೆ ಬೇರೆ ಆಯುಧಗಳಿಂದ ಆತನ ಮೇಲೆ ಹಲ್ಲೆ ಮಾಡಿರುವುದು ನಿಮ್ಮ

ತನಿಖೆಯಲ್ಲಿ ಕಂಡುಬಂದಿದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ